ಹುಮ್ನಾಬಾದ್ ತಾಲ್ಲೂಕು

1. ಜಮಿಯ ಮಸ್ಜಿದ್, ಮಂಗಲ್ಪಿ
2. ಜಮಿಯ ಮಸ್ಜಿದ್, ಮುರ್ತಂಗಿ.
3. ಮಸ್ಜಿದ್, ಮನೂರಕೇಲಿ.
4. ಜಮೆ ಮಸ್ಜಿದ್, ನಿರ್ಣ.
5. ಮಸ್ಜಿದ್, ಮೊಹಲ್ಲಾ ನೂರ್‌ಖಾನ್ ಅಖೋಡ.
6. ಜಮಿಯ ಮಸ್ಜಿದ್ ಮಡೇಗಿ.
7. ಮಸ್ಜಿದ್ ಗೋಶಿಯ ಚಿತಗುಪ್ಪ.
8. ಮಸ್ಜಿದ್ ಬಲಾಲ್ ಮಶ್ತರಿ.
9. ಜಮಿಯ ಮಸ್ಜಿದ್, ಹಲ್ಲಿಖೇಡ್.

ಆ) ಸಹಾಯಧನವನ್ನು ಇನ್ನೂ ಬಿಡುಗಡೆ ಮಾಡಿರುವುದಿಲ್ಲ.

ರಾಜ್ಯದಲ್ಲಿ ಕೈಗೊಂಡಿರುವ ಸಮಗ್ರ ಸಾಕ್ಷರತಾ ಆಂದೋಲನ

1518. ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಬೀದರ್) :– ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) 1991–92ನೇ ಸಾಲಿನಲ್ಲಿ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಸಮಗ್ರ ಸಾಕ್ಷರತಾ ಆಂದೋಲನವನ್ನು ಕೈಗೊಳ್ಳಲು ಉದ್ದೇಶಿಸಲಾಗಿತ್ತು?

ಆ) ಇದಕ್ಕಾಗಿ ಮುಂಗಡ ಪತ್ರದಲ್ಲಿ ನಿಗದಿಪಡಿಸಲಾಗಿದ್ದ ಹಣವೆಷ್ಟು?

ಇ) ಇದರಲ್ಲಿ ಇದುವರೆವಿಗೂ ಬಿಡುಗಡೆ ಮಾಡಲಾದ ಹಣದ ಮೊತ್ತವೆಷ್ಟು? (ಜನವರಿ 31, 1992) (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಈ) ಸಾಕ್ಷರತಾ ಆಂದೋಲನದಿಂದ ಎಷ್ಟು ಲಕ್ಷ ಜನರು ಅಕ್ಷರಸ್ಥರಾಗಲಿದ್ದಾರೆ.

ಉ) ಶೈಕ್ಷಣಿಕವಾಗಿ ತೀರಾ ಹಿಂದುಳಿದಿರುವ ಬೀದರ್ ಜಿಲ್ಲೆಗೆ ಈ ಯೋಜನೆಯ ಅಡಿಯಲ್ಲಿ ಹೆಚ್ಚಿನ ಪ್ರಮಾಣದ ಹಣವನ್ನೇನಾದರೂ ಬಿಡುಗಡೆ ಮಾಡಲಾಗಿದೆಯೇ?

ಊ) ಮಾಡಿದ್ದಲ್ಲಿ ಎಷ್ಟು ಪ್ರಮಾಣದ ಹಣವನ್ನು ಹೆಚ್ಚಿಗೆ ಬಿಡುಗಡೆ ಮಾಡಲಾಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಸಚಿವರು) –

ಅ) 1991–92ನೇ ಸಾಲಿನಲ್ಲಿ ಮಂಡ್ಯ, ರಾಯಚೂರು, ತುಮಕೂರು, ಬೀದರ್, ಶಿವಮೊಗ್ಗ ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನವನ್ನು ಕೈಗೊಳ್ಳಲು ಉದ್ದೇಶಿಸಲಾಗಿತ್ತು.

ಆ) 1991–92ನೇ ಸಾಲಿನಲ್ಲಿ ಸಂಪೂರ್ಣ ಸಾಕ್ಷರತಾ ಆಂದೋಲನಕ್ಕಾಗಿಯೇ ಪ್ರತ್ಯೇಕವಾಗಿ ಹಣವನ್ನು ಮುಂಗಡ ಪತ್ರದಲ್ಲಿ ನಿಗದಿಪಡಿಸಿರುವುದಿಲ್ಲ.

ಇ) ಸಂಪೂರ್ಣ ಸಾಕ್ಷರತಾ ಆಂದೋಲನಕ್ಕಾಗಿ ರಾಜ್ಯದ ಪಾಲನ್ನು (ಜನವರಿ 31, 1992 ರಂತೆ) ಈ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

ಜಿಲ್ಲೆ	ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ)
ಮಂಡ್ಯ	79.05
ರಾಯಚೂರು	80.29
ತುಮಕೂರು	30.31
ಬೀದರ್ ಮತ್ತು ಶಿವಮೊಗ್ಗ	ಈ ಜಿಲ್ಲೆಗಳಲ್ಲಿ ಪ್ರಾರಂಭದ ಹಂತದಲ್ಲಿ ಇರುವುದರಿಂದ ರಾಜ್ಯದ ಪಾಲು ಇನ್ನೂ ಬಿಡುಗಡೆಯಾಗಿರುವುದಿಲ್ಲ.

ಈ) ಜಿಲ್ಲೆಗಳ ಆಂದೋಲನ ಯೋಜನೆಗಳ ಅಂದಾಜಿನಂತೆ 5 ಜಿಲ್ಲೆಗಳಿಂದ ಸುಮಾರು 20,63,000 ಜನ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸುವ ಗುರಿ ಹಮ್ಮಿಕೊಳ್ಳಲಾಗಿದೆ.

ಉ) ರಾಷ್ಟ್ರೀಯ ಸಾಕ್ಷರತಾ ನಿಯೋಗದ ನಿಯಮದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಂಪೂರ್ಣ ಸಾಕ್ಷರತಾ ಆಂದೋಲನಕ್ಕೆ ಹಣವನ್ನು ಬಿಡುಗಡೆ ಮಾಡಲಾಗುವುದು. ಆದ್ದರಿಂದ ಒಂದು ಜಿಲ್ಲೆಗೆ ಹೆಚ್ಚು ಅಥವಾ ಕಡಿಮೆ ಎಂಬ ಪ್ರಶ್ನೆ ಬರುವುದಿಲ್ಲ.

ಊ) ಉದ್ಭವಿಸುವುದಿಲ್ಲ

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಉಪನಿರ್ದೇಶಕರ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಸಹಾಯಕ ಕಮೀಷನರ್‌ಗಳ ಸಂಖ್ಯೆ

1578. ಶ್ರೀ ಎ.ಎಂ. ಹಿಂಡಸ್ಗೇರಿ (ಹುಬ್ಬಳ್ಳಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ಉಪ ನಿರ್ದೇಶಕರ ಹುದ್ದೆಗಳಿಗೆದುರಾಗಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಇಲಾಖೆಯ ಸಹಾಯಕ ಕಮೀಷನರ್‌ಗಳ ಒಟ್ಟು ಸಂಖ್ಯೆ ?

ಆ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಪದವ್ಯಂದ ಮತ್ತು ನೇಮಕಾತಿ ನಿಯಮಗಳಲ್ಲಿ ಉಪ ನಿರ್ದೇಶಕರ ಹುದ್ದೆಗೆ ಇತರ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆಯೇ?

ಇ) ಕೆ.ಎ.ಎಸ್. ಅಧಿಕಾರಿಗಳನ್ನು ಅವರ ಮಾತೃ ಇಲಾಖೆಗೆ ಹಿಂದಿರುಗಿಸುವ ಪ್ರಸ್ತಾವನೆ ಏನಾದರೂ ಇದೆಯೇ?

ಈ) ಹಾಗಿದ್ದಲ್ಲಿ ಯಾವಾಗ ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) –

ಅ) 25

ಆ) ಇಲ್ಲ

ಇ) ಹೌದು

ಈ) ಇಲಾಖೆಯ ಅರ್ಹ ಅಧಿಕಾರಿಗಳ ಪ್ರಕರಣಗಳನ್ನು ಸಿ ಆಂಡ್ ಆರ್ ನಿಯಮಗಳನುಸಾರ ಪರಿಶೀಲಿಸಿ, ಅವರುಗಳಿಗೆ ಪದೋನ್ನತಿ ನೀಡಿ ಆದೇಶಗಳನ್ನು ಹೊರಡಿಸುವ ಸಂದರ್ಭದಲ್ಲಿ.

ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ

1581. ಶ್ರೀ ಕೆ.ಹೆಚ್. ಕುರುಡಗಿ (ಮುಂಡರಗಿ) :– ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಅದರಲ್ಲಿ ಗದಗ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಶಿಕ್ಷಕರ ಹುದ್ದೆಗಳು ಬಹಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಹುಡುಗರ ಪಠ್ಯ ಸಂಖ್ಯೆಗಳ ಪ್ರಕಾರ ಇರಬೇಕಾದ ಹುದ್ದೆಗಳು ಎಷ್ಟು ಹಾಗೂ ಅವುಗಳನ್ನು ತುಂಬುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;